# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 811(915)

ಮಾನ್ಯ ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ.
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.08.2025

ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರಿನಲ್ಲಿ Industrial Growth Centre ನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಅಲ್ಲಿ ನೀಡಲಾದ ಮೂಲಭೂತ ಸೌಕರ್ಯಗಳಾವುವು;<br>(ಸಂಪೂರ್ಣವಾದ ಮಾಹಿತಿ ನೀಡುವುದು) | ರಾಯಚೂರು ಗ್ರೋಥ್ ಸೆಂಟರ್ 2005ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ.<br>ಸದರಿ ಕೈಗಾರಿಕಾ ಪ್ರದೇಶಕ್ಕೆ ನೀಡಲಾಗಿರುವ ಮೂಲಭೂತ ಸೌಕರ್ಯಗಳು ಈ ಕೆಳಗಿನಂತಿವೆ:-<br>➢ ನೀರಿನ ಸರಬರಾಜು- 10 ಎಂ.ಎಲ್.ಡಿ. ನೀರನ್ನು ಸ್ಥಳೀಯ ನಗರ ಸಭೆಯಿಂದ ಪಡೆದುಕೊಂಡು ಕೈಗಾರಿಕಾ ಪ್ರದೇಶಕ್ಕೆ ಸರಬರಾಜು ಮಾಡಲಾಗುತ್ತಿದೆ.<br>➢ ಮಂಡಳಿ ವತಿಯಿಂದ ರಸ್ತೆ, ಚರಂಡಿ, ವಿದ್ಯುದೀಕರಣ ಮೂಲಭೂತ ಸೌಕರ್ಯಗಳೊಂದಿಗೆ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.<br>➢ ಸದರಿ ಪ್ರದೇಶಕ್ಕೆ ಟ್ರಕ್ ಟರ್ಮಿನಲ್ ಸ್ಥಾಪನೆ ಬಗ್ಗೆ 20.00 ಎಕರೆ ಜಮೀನನ್ನು ದೇವರಾಜ್ ಅರಸು ಟ್ರಕ್ ಟರ್ಮಿನಲ್ ರವರಿಗೆ ಹಂಚಿಕೆ ಮಾಡಿದ್ದು, ಸದರಿಯವರು ಮಂಡಳಿಗೆ ಭೂದರ ಪಾವತಿಯೊಂದಿಗೆ ಉದ್ದೇಶಿತ ಯೋಜನೆಯನ್ನು ಅನುಷ್ಠಾನ ಮಾಡಲು ಬಾಕಿ ಇರುತ್ತದೆ. |
| ಆ) | ರಾಯಚೂರಿನಲ್ಲಿ Industrial Growth Centre ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;<br>(ಸಂಪೂರ್ಣವಾದ ಮಾಹಿತಿ ನೀಡುವುದು). | 2024-25 ನೇ ಸಾಲಿನಲ್ಲಿ ರಾಯಚೂರು ಗ್ರೋಥ್ ಸೆಂಟರ್ ನಲ್ಲಿ ಬರುವ ಮುಖ್ಯ ರಸ್ತೆ, (ವಡ್ಲೂರು ರಸ್ತೆ) ಉನ್ನತ್ತೀಕರಣಕ್ಕಾಗಿ ರೂ.10.00 ಕೋಟಿ ಅನುದಾನವನ್ನು ಮಂಡಳಿ ವತಿಯಿಂದ ನೀಡಲಾಗಿರುತ್ತದೆ ಹಾಗೂ ಕಾಮಗಾರಿ ಅಂತಿಮ ಹಂತದಲ್ಲಿದೆ.<br>ಉಳಿದ ರಸ್ತೆಗಳ ಅಭಿವೃದ್ಧಿ ಹಾಗೂ ಸ್ವತಂತ್ರ ನೀರು ಸರಬರಾಜು ಯೋಜನೆಗಾಗಿ ಡಿ.ಪಿ.ಆರ್ ಅನ್ನು ತಯಾರಿಸಲಾಗಿರುತ್ತದೆ. |

| | | |
|---|---|---|
| ಇ) | ಸದರಿ ಕೈಗಾರಿಕಾ ಪ್ರದೇಶದಲ್ಲಿ CETP ಘಟಕ ನಿರ್ಮಿಸದಿರಲು ಕಾರಣಗಳೇನು; ಅಲ್ಲಿ CETP ಘಟಕವನ್ನು ಯಾವ ಕಾಲ ಮಿತಿಯಲ್ಲಿ ನಿರ್ಮಿಸಲಾಗುವುದು; | ರಾಯಚೂರು ಗ್ರೋಥ್ ಸೆಂಟರ್‌ನಲ್ಲಿ ಸಿ.ಇ.ಟಿ.ಪಿ. ಸಂಸ್ಕರಿಸಲು M/s. Mother Earth Environ Tech Pvt. Ltd Bangaluru ರವರಿಗೆ 5.00 ಎಕರೆ ಜಮೀನು ನೀಡಲಾಗಿದ್ದು, ಸದರಿ ಕಂಪನಿಯವರು ಪರಿಸರ ವಿಮೋಚನಾ ಪತ್ರ ಪಡೆಯಲು ಎಂ.ಓ.ಇ.ಎಫ್. ನವದೆಹಲಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಎಂ.ಓ.ಇ.ಎಫ್. ಸಭೆಯಲ್ಲಿ ಪರಿಸರ ವಿಮೋಚನಾ ಪತ್ರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. |
| ಈ | ರಾಯಚೂರಿನಲ್ಲಿ Industrial Growth Centre ನಲ್ಲಿ ವಾಸದ ಉದ್ದೇಶಕ್ಕಾಗಿ ಎಷ್ಟು ಪ್ರಮಾಣದ ಭೂಮಿಯನ್ನು ಪರಿವರ್ತನೆ ಮಾಡಲಾಗಿದೆ; ಹಾಗೂ ಸದರಿ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಿಸಿದ ನಿವೇಶನಗಳ ಸಂಖ್ಯೆ ಎಷ್ಟು? (ಮಾಹಿತಿ ನೀಡುವುದು) | ರಾಯಚೂರು ಗ್ರೋಥ್ ಸೆಂಟರ್‌ಗಾಗಿ ಒಟ್ಟು 2000 ಎಕರೆ ಭೂಸ್ವಾಧೀನಪಡಿಸಿಕೊಂಡಿದ್ದು, ಸುಮಾರು 1745.31 ಎಕರೆ ಪ್ರದೇಶವನ್ನು ಕೈಗಾರಿಕಾ ವಸಾಹತು ಸ್ಥಾಪಿಸಲಾಗಿರುತ್ತದೆ ಹಾಗೂ 10% ಹೌಸಿಂಗ್ ಲೇಔಟ್ ಅನ್ನು ನಿರ್ಮಿಸಲಾಗಿರುತ್ತದೆ (253.35 ಎಕರೆ).<br><br>ಮಂಡಳಿಯ ಹಂಚಿಕೆ ನಿಯಮಾವಳಿಗಳ ಅನುಸಾರ ವಸತಿ ಬಡಾವಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗದವರಿಗೆ ವಸತಿ ನಿವೇಶನಗಳನ್ನು ಮೀಸಲಿರಿಸುವ ಬಗ್ಗೆ ಕಾರ್ಯನೀತಿ ಇರುವುದಿಲ್ಲ. |

**ಸಂಖ್ಯೆ: ಸಿಐ 446 ಐಎಪಿ 2025**

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು